

ಏನು ಮಾಡುತ್ತಿದ್ದಾರೆ ಇವರು? ಕಾರಣವಿಲ್ಲದೇ ಯಾಕೆ ಇಂಥ ಒಳ್ಳೆಯ ಟ್ರೀಟ್ ಕೊಡುತ್ತಾರೆ? ಎಂಬ ಯೋಚನೆಗಳು ಬಂದು ಹೋದರೂ ಕಾದು ನೋಡುವಾ ಅಂತ ಸುಮ್ಮನೇ ಅತ್ತಿತ್ತ ಕಣ್ಣು ಹಾಯಿಸುತ್ತ ಮೊಬೈಲಿನಲ್ಲಿ ಒಮ್ಮೆ ಸಮಯ ನೋಡಿದ. ಚೇಂಬರಿನ ಕೌಂಟರ್ ಕಡೆ ಎದ್ದು ಹೋಗಿ 'ನಮಗೆ ಸ್ವಲ್ಪ ಬೇರೆ ಕೆಲಸವಿತ್ತು, ಎಷ್ಟೊತ್ತು ಇನ್ನೂ?' ಕೇಳಿದ. 'ಎರಡೇ ಎರಡು ನಿಮಿಷ, ಕೂತ್ಕೊಳ್ಳಿ ಸಾರ್' ಎನ್ನುವ ಉತ್ತರ ಅಲ್ಲಿ ತೀರಾ ದೈನ್ಯತೆಯಿಂದ ಬಂತು.

ವಿಶ್ವನಾಥ ಆ ವ್ಯಕ್ತಿಯನ್ನೂ ಮಂಜುಳಾ ಆ ಹೆಂಗಸನ್ನೂ ಒಮ್ಮೆ ಕಣ್ಣು ಹೊರಳಿಸಿ ನೋಡಿ ನಗಬೇಕೋ ಬೇಡವೋ ಎಂಬ ಸಂದೇಹದಲ್ಲೇ ಕೊನೆಗೂ ಮುಗುಳು ನಕ್ಕರು. ಅಷ್ಟರಲ್ಲೇ ಹೊರಗಿನಿಂದ ಬಂದ ಇನ್ನೊಬ್ಬ ತರುಣ 'ಹಲೋ ಐ ಯಾಮ್ ಸಂದೇಶ್, ಬನ್ನಿ' ಎನ್ನುತ್ತ ಇಬ್ಬರು ಗಂಡಸರಿಗೂ ಶೇಕ್‌ಹ್ಯಾಂಡ್ ಮಾಡಿ ಪಕ್ಕದ ಸಂಭಾಂಗಣಕ್ಕೆ ಕರೆದೊಯ್ದ. ವಿಶ್ವನಾಥನಿಗೆ ಹೆಲ್ಮೆಟ್ ತೊಗೊಳ್ಳುವದೋ ಇಲ್ಲೇ ಇಡುವುದೋ ಮತ್ತೆ ಅನುಮಾನ ಕಾಡಿತು. ಆಗ ಬಂದ ತರುಣನೇ 'ನಿಮ್ಮ ತಲೆ ನಿಮ್ಮ ಬಳಿಯೇ ಇಟ್ಟುಕೊಳ್ಳಿ' ಅಂತ ದೊಡ್ಡ ಜೋಕು ಮಾಡಿದವನಂತೆ ತಾನೇ ನಕ್ಕಿದ್ದ. 'ಹೌದು ಅದೇ ಸರಿ' ಅಂದನಾದರೂ ವಿಶ್ವನಾಥ ಮನಸ್ಸಿನಲ್ಲೇ 'ನಮ್ಮ ತಲೆ ನಮ್ಮ ಬಳಿಯೇ ಉಂಟು' ಅಂದುಕೊಳ್ಳುತ್ತಲೇ ಅವನನ್ನು ಹಿಂಬಾಲಿಸಿದ್ದ. 'ಫೋನ್ ಮಾಡಿದ್ದು ನೀವೇ ಅಲ್ಲವೇ?' ಅಂತ ಕೇಳುತ್ತಲೇ ವಿಶ್ವನಾಥ, ಲಾಟರಿ ಸಿಸ್ಟೆಮ್ಮಿನ ಕುರಿತು ಕೇಳಲಾರಂಭಿಸಿದ್ದೇ ಸಂದೇಶ್ 'ಎಲ್ಲ ಹೇಳುತ್ತೇವೆ, ಇದೀಗ ಎಲ್ಲ ಹೇಳುತ್ತೇವೆ' ಅಂತ ಯಾವ ಮಾತನ್ನೂ ಮುಂದುವರೆಸಲಿಲ್ಲ.